ಬಳಿಕ ಯೌವನಮಾಗೆ ತಾಯ್ತಂದೆಗಳ್ಕಂಡು
ತಿಳಿದೊಂದು ಮದುವೆಯಂ ಮಾಡಲ್ಮನಂದಂದು
ಪಶುವಿನ ಕೊರಳಲೊಂದು ಪಾಶಮಂ ಬಿಗಿವಂತೆ
ಮಿಸುಕದಂತಲ್ಲೊಂದು ಎಳೆ ಮರವ ಬಿಗಿದಂತೆ
ದೈತೆಯಂ ತಂದೊರ್ಬಳಂ ಮದುವೆಯಂ ಮಾಡಿ
ಯೌವನದ ಗರ್ವದಿಂ ಧನದ ಗರ್ವದಿಂ
ಒತ್ತರಿಸಿ ಪಿತ್ಥವದು ತಲೆಗೇರಿತೆಂಬಂತೆ... ಎಂದಿದ್ದಾನೆ.

ಸ್ತ್ರೀ ಪುರುಷ ಸಂಬಂಧದ ಯಾವತ್ತೂ ಮೋಹವನ್ನು ಇಂಥ ವಿರಕ್ತಿಯಿಂದ ಮಾತನಾಡುವ ಹರಿಹರ 'ನಂಬಿಯಣ್ಣನ ರಗಳೆ', 'ಮಲುಹಣ – ಮಲುಹಣಿ' ಇನ್ನು ಮುಂತಾದ ಕಥೆಗಳಲ್ಲಿ ಪ್ರೇಮ, ಕಾಮಗಳ ಉತ್ಕಟತೆಯನ್ನು ಅದರ ತುತ್ತತುದಿಗೆ ಒಯ್ಯುತ್ತಾನೆಂದರೆ ಅವನಿಗೆ ಅದೇನಿದ್ದರೂ ಮಹಾವಿರಕ್ತಿ ಪೂರ್ವದ ಸಂಗತಿಯಾಗಿ ತೋರುತ್ತದೆ. ಅಷ್ಟೇ ಅಲ್ಲ ಹರಿಹರನ ಆರಂಭಿಕ ಚಂಪೂ ಕಾವ್ಯ 'ಗಿರಿಜಾ ಕಲ್ಯಾಣ'ದಿಂದ ಹಿಡಿದು ಅವನ ಎಲ್ಲ ರಗಳೆಯ ಕಥೆಗಳನ್ನು ಗಮನಿಸಿದರೆ ಪ್ರೇಮ ಕಾಮದ ಉತ್ಕರ್ಷವನ್ನು ಎಲ್ಲಿಗೆ ಒಯ್ಯುತ್ತಾನೋ ಅಲ್ಲಿಯೇ ತುಂಡುಗಡಿದು ಅದನ್ನು ಲೌಕಿಕ ನೆಲೆಯಲ್ಲಿ ಉಳಿಸದೆ ದೈವಚಿತ್ತದತ್ತ ತಿರುಗಿಸಿಬಿಡುತ್ತಾನೆ.

ಮನದ ತುಂಬ ಆವರಿಸಿಕೊಂಡ ಸುಂದರಿ ಮಲುಹಣಿಯನ್ನು ಬಿಡಲಾರದೆ ಮಲುಹಣ ವಿರಹದ ಬೆಂಕಿ ಹತ್ತಿಸಿಕೊಂಡು ಒಂದು ರಾತ್ರಿ ಅವಳ ಮನೆಯ ಹಿಂದೆ ಅವಳದೇ ಧ್ಯಾನ ಮಾಡುತ್ತ ಕೂತ. ರಾತ್ರಿ ಸಖಿಯೊಬ್ಬಳು ಮಲುಹಣಿ ಉಂಡ ತಟ್ಟೆಯ ಎಂಜಲು ನೀರನ್ನು ಮಹಡಿಯಿಂದ ಸುರಿಯಲು ಅದು ಕೆಳಗೆ ಮುದುರಿ ಕೂತಿದ್ದ ಮಲುಹಣನ ಮೇಲೆ ಚೆಲ್ಲಿತು. ಅವನು ಕುಳಿತಿದ್ದುದೇ ಎಂಜಲು ಸುರಿಯುವ ಕುಣಿಯಲ್ಲಿ. ರಾತ್ರಿಯೆಲ್ಲ ಬಯಲಲ್ಲಿ ಕೂತ ಅವನ ಮೈ ಮೇಲೆ ಹಿಮಪಾತವಾಗಿತ್ತು. ಯಾಕೆಂದರೆ, ಅದು ಕಾಶ್ಮೀರ ದೇಶ. ಮಲುಹಣಿ ಪ್ರಾತಃಕಾಲ ತನ್ನ ಪ್ರೇಮಿಯ ದುಃಸ್ಥಿತಿಯನ್ನು ಕಂಡು ಮರುಗಿ, 'ಎನ್ನ ಮೇಲಿಕ್ಕುವಾ ಚಿತ್ತದಾತುರತೆಯಂ| ಪನ್ನಗಾಭರಣನೊಳು ಮಾಳ್ಪದೆನ್ನೊಲುಮೆಯಂ...' ಎಂದವಳು, ದೈವ ಧ್ಯಾನದಲ್ಲಿ ನಿನ್ನ ದುಃಖ ನೀಗಿಕೊಳ್ಳುವುದಾದರೆ ಅದು ನನ್ನಂಥ ಕೋಟಿ ಮಲುಹಣಿಯರು ದೊರಕಿದ ಸಂತಸ ಭಾವ ನಿನಗಾಗಬಹುದು ಎನ್ನುತ್ತಾಳೆ. ಈ ಕಥೆ ರಾಮಚರಿತ ಮಾನಸ ಮಹಾಕಾವ್ಯ ರಚಿಸಿದ ಹಿಂದಿಯ ತುಳಸಿದಾಸನ ಪೂರ್ವಾಶ್ರಮದ ಕಥೆಯನ್ನು ನೆನಪಿಸುವಂತಿದೆ. ಸ್ತ್ರೀ ಮೋಹಿಯಲ್ಲದ ಹರಿಹರ ಸುಂದರ ಹೆಣ್ಣೊಬ್ಬಳ ಅಂತರಂಗದಿದ ಆಡಿಸುವ ಈ ಮಾತುಗಳನ್ನು ಆಲಿಸಿದರೆ ಕವಿ ಅದೇ ಸ್ತ್ರೀ ಪ್ರೇಮವನ್ನು, ಶಕ್ತಿಯನ್ನು ಪಾರ್ವತಿಯ ಭಾವದಲ್ಲಿ ನೋಡಿರುತ್ತಾನೆನಿಸುತ್ತದೆ.

ಗಿರಿಜೆ ಮನ್ಮಥನೊಂದಿಗೆ ತಾನು ಮೆಚ್ಚಿದ ಶಿವನನ್ನು ತನುಮನಗಳಲ್ಲಿ ತುಂಬಿಕೊಂಡು ಹೇಮಕೂಟಕ್ಕೆ ಬರುವಲ್ಲಿ ಅಲ್ಲೇ ಮನ್ಮಥ ದಹನವಾಗಿ, ಗಿರಿಜೆ ಅನಿರೀಕ್ಷಿತ ನೈರಾಶ್ಯದಲ್ಲಿ ಬೀಳುವುದು ಮತ್ತೆ ಪ್ರೇಮ ತಪಸ್ಸಿಗೆ ಕೂರುವುದು ಹರಿಹರನಿಗೆ ಪ್ರಿಯವೆನಿಸುತ್ತದೆ. ಕಾಮರಹಿತ ಮೋಹ, ಭಕ್ತಿ ಬೆರೆತ ಪ್ರೇಮ ಹರಿಹರನ ಘನ ಉದ್ದೇಶ. ಅವನಿಗೆ ಸೂರ್ಯೋದಯವೂ ಹರ ಕರುಣೆ, ಕಾವೇರಿ ಗಂಗಾ ನದಿ ಹರಿಯುವುದೂ ಭಕ್ತಿರಸದಂತೆ!

★★★

ಹರಿಹರ ತನ್ನ ಕಂಠ ಪತ್ರವನ್ನು ಕಾವ್ಯ ರಚನೆಗೆ ಸಿದ್ಧಗೊಳಿಸಿಕೊಳ್ಳುತ್ತಿದ್ದ ಹಂತದಲ್ಲೇ ಗಿರಿಜಾ ಕಲ್ಯಾಣವೆಂಬ ಚಂಪೂ ಕಾವ್ಯವನ್ನು ಬರೆದನೆಂದು ಬಹುತೇಕ ವಿದ್ವಾಂಸರು ಒಪ್ಪಿಕೊಂಡಿದ್ದಾರೆ.